ಪತ್ರಿಕಾ ತುಣುಕುಗಳು
**PAPER CLIPPINGS**

9

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19- ಬಿಬಿಎಂಪಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE : 10/4/21

### ಕಿರುಕುಳ ನೀಡಿದರೆ ಉದ್ಯಮ ನಡೆಸುವುದು ಕಷ್ಟ, ಮುಚ್ಚಿಸುವ ಮೊದಲು ನೋಟಿಸ್ ಕೊಡಲಿ: ಮಾಲೀಕರ ವಾದ


# ಹೋಟೆಲ್‌ಗಳ ಮೇಲೆ ಸವಾರಿಗೆ ಆಕ್ರೋಶ


ವಿಕ ಸುದ್ದಿಲೋಕ ಬೆಂಗಳೂರು

ಕೋವಿಡ್ ನಿಯಮ ಪಾಲನೆ ಮಾಡುತ್ತಿಲ್ಲ ಎಂಬ ದೂರಿನ ಮೇಲೆ ನಗರದಲ್ಲಿ ಸಾಲು ಸಾಲಾಗಿ ಹೋಟೆಲ್, ಅಂಗಡಿಗಳನ್ನು ಬಿಬಿಎಂಪಿ ಸಿಬ್ಬಂದಿ ಮುಚ್ಚಿಸುತ್ತಿರುವುದಕ್ಕೆ ಹೋಟೆಲ್ ಹಾಗೂ ವಾಣಿಜ್ಯೋದ್ಯಮ ವಲಯದಿಂದ ಭಾರಿ ವಿರೋಧ ವ್ಯಕ್ತವಾಗಿದೆ.

ಲಾಕ್‌ಡೌನ್‌ನಿಂದ ತತ್ತರಿಸಿರುವ ಹೋಟೆಲ್ ಉದ್ಯಮ ಈಗಷ್ಟೇ ಚೇತರಿಸಿಕೊಳ್ಳುತ್ತಿದೆ. ಆದರೆ ಕೋವಿಡ್ ನಿಯಮ ಪಾಲನೆ ನೆಪದಲ್ಲಿ ದಂಡ ಹಾಕುವುದು ಹಾಗೂ ಬಾಗಿಲು ಮುಚ್ಚಿಸಿದರೆ ಉದ್ಯಮ ನಂಬಿಕೊಂಡಿರುವ ಕುಟುಂಬಗಳು ಬೀದಿಪಾಲಾಗುತ್ತವೆ. ಲಾಕ್‌ಡೌನ್ ಬಳಿಕ ನೂರಾರು ಹೋಟೆಲ್ ಹಾಗೂ ದರ್ಶಿನಿಗಳು ಬಾಗಿಲು ಮುಚ್ಚಿವೆ. ಈಗ ದಂಡ ಹಾಕಿ ಬಿಬಿಎಂಪಿ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ. ಹೀಗಾದರೆ ಉದ್ಯಮ ನಡೆಸುವುದು ಹೇಗೆ ಎಂದು ಹೋಟೆಲ್ ಮಾಲೀಕರು ಪ್ರಶ್ನಿಸಿದ್ದಾರೆ.

''ಬಸ್ ಹಾಗೂ ರೈಲು ನಿಲ್ದಾಣಗಳಲ್ಲಿ, ಮಾರುಕಟ್ಟೆಗಳಲ್ಲಿ, ಮಾಲ್‌ಗಳಲ್ಲಿ, ದೇವಸ್ಥಾನಗಳಲ್ಲಿ ಹಾಗೂ ಚುನಾವಣೆ ರ‍್ಯಾಲಿಗಳಲ್ಲಿ ಕೋವಿಡ್ ನಿಯಮ ಪಾಲನೆ ಮಾಡುತ್ತಿಲ್ಲ. ಅಲ್ಲಿ ಇಲ್ಲದ ನಿಯಮಗಳನ್ನು ನಮ್ಮ ಉದ್ಯಮದ ಮೇಲೆ ಹೇರುವುದು ಎಷ್ಟು ಸರಿ. ಇಷ್ಟಕ್ಕೂ ಚುನಾವಣೆ ರ‍್ಯಾಲಿಗಳಂತೆ ನಮ್ಮ ಹೋಟೆಲ್‌ಗಳಲ್ಲಿ ಜನಜಂಗುಳಿ ಇಲ್ಲ.





ನಿಯಮ ಪಾಲನೆ ಮಾಡದ ಹೋಟೆಲ್‌ಗಳಿಗೆ ಮೊದಲು ನೋಟಿಸ್ ನೀಡಲಿ. ಅದನ್ನು ಬಿಟ್ಟು ತಕ್ಷಣವೇ ಬೀಗ ಹಾಕಿಸುವುದು ಸರಿಯಲ್ಲ. ಈ ಸಂಬಂಧ ಬಿಬಿಎಂಪಿ ಮುಖ್ಯ ಆಯುಕ್ತರಿಗೂ ದೂರು ಸಲ್ಲಿಸಿದ್ದೇವೆ.

– **ಪಿ.ಸಿ.ರಾವ್** ಅಧ್ಯಕ್ಷರು, ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ

- ಹೋಟೆಲ್ ಪ್ರವೇಶ ದ್ವಾರದಲ್ಲಿ ಥರ್ಮಲ್ ಸ್ಕ್ಯಾನಿಂಗ್ ಮಾಡಬೇಕು
- ಪ್ರವೇಶ ದ್ವಾರದಲ್ಲೇ ಸ್ಯಾನಿಟೈಸ್ ಇಡಬೇಕು
- ಗ್ರಾಹಕರು ಹಾಗೂ ಸಿಬ್ಬಂದಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು
- ಟೇಬಲ್‌ಗಳಲ್ಲಿ ಸಾಮಾಜಿಕ ಅಂತರ ಇರುವಂತೆ ನೋಡಿಕೊಳ್ಳಬೇಕು.
- ಹೋಟೆಲ್ ಸಿಬ್ಬಂದಿಗೆ ಪ್ರತಿ 15 ದಿನಗಳಿಗೊಮ್ಮೆ ಕೋವಿಡ್ ಟೆಸ್ಟ್ ಮಾಡಿಸಬೇಕು
- ಅಡುಗೆ ಮನೆಯಲ್ಲಿ ಸಿಬ್ಬಂದಿ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು.

## 28 ಮಳಿಗೆಗಳಿಗೆ ಬೀಗ

**ಬೆಂಗಳೂರು:** ಕೊರೊನಾ ಸೋಂಕು ಹರಡುವುದನ್ನು ತಡೆಯುವ ಉದ್ದೇಶದಿಂದ ಸರಕಾರ ರೂಪಿಸಿರುವ ಮಾರ್ಗಸೂಚಿಗಳನ್ನು ಪಾಲಿಸದ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಮಳಿಗೆಗಳು, ಸೂಪರ್ ಮಾರ್ಕೆಟ್‌ಗಳ ವಿರುದ್ಧ ದಾಳಿ ಮುಂದುವರಿಸಿರುವ ಬಿಬಿಎಂಪಿ ಅಧಿಕಾರಿಗಳು ಶುಕ್ರವಾರ ಒಂದೇ ದಿನ 28 ಮಳಿಗೆಗಳನ್ನು ಮುಚ್ಚಿಸಿದ್ದಾರೆ.

**15,100 ರೂ. ದಂಡ ವಸೂಲು**

ಮಾಸ್ಕ್ ಧರಿಸದ, ಸಾಮಾಜಿಕ ಅಂತರ ಕಾಯ್ದುಕೊಳ್ಳದ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಅಂಗಡಿ– ಮುಂಗಟ್ಟುಗಳ ಸಿಬ್ಬಂದಿಗೆ, ಗ್ರಾಹಕರಿಗೆ ದಂಡ ವಿಧಿಸಲಾಗಿದೆ. ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘಿಸಿದ್ದ ರಾಜರಾಜೇಶ್ವರಿನಗರದ ಎ ಟು ಝಡ್ ಮಾರ್ಕೆಟ್, ಗಾಂಧಿನಗರದ ಲಸ್ಸಿ ಬಾರ್ ಆ್ಯಂಡ್ ಕಾಂಡಿಮೆಂಟ್ಸ್, ಟೀ ಸ್ಟಾಲ್, ರಶ್ಮಿ ಫ್ಯಾನ್ಸಿ ಸ್ಟೋರ್, ಪೂನಂ ಕಾಂಡಿಮೆಂಟ್ಸ್, ಶ್ರೀ ಕೃಷ್ಣ ಬೇಕರಿಗೆ ಬೀಗ ಮುದ್ರೆ ಹಾಕಲಾಗಿದೆ. ಪಶ್ಚಿಮ ವಲಯದಲ್ಲಿ ಒಟ್ಟು 17 ಉದ್ದಿಮೆಗಳಿಂದ 15100 ರೂ. ದಂಡ ವಸೂಲು ಮಾಡಲಾಗಿದೆ.

## ಕೋವಿಡ್ ನಿಯಂತ್ರಣಕ್ಕೆ ನಿಯಮ ಪಾಲನೆ ಕಡ್ಡಾಯ

**ಬೆಂಗಳೂರು:** ನಗರದಲ್ಲಿ ನಿತ್ಯ 6 ಸಾವಿರಕ್ಕೂ ಅಧಿಕ ಕೋವಿಡ್ ಸೋಂಕು ಪ್ರಕರಣಗಳು ಪತ್ತೆಯಾಗುತ್ತಿದ್ದು, ಅದನ್ನು ನಿಯಂತ್ರಿಸಲು ಹೋಟೆಲ್‌ಗಳು ಸೇರಿದಂತೆ ಎಲ್ಲರೂ ಕಡ್ಡಾಯವಾಗಿ ಕೋವಿಡ್ ನಿಯಮಗಳನ್ನು ಪಾಲಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ ಹೇಳಿದರು.

ಹೋಟೆಲ್ ಮಾಲೀಕರ ಸಂಘದ ಪದಾಧಿಕಾರಿಗಳ ಜತೆ ವರ್ಚುವಲ್ ಸಭೆ ನಡೆಸಿದ ಅವರು, ''ಎಲ್ಲ ಹೋಟೆಲ್‌ಗಳಲ್ಲೂ ಕಡ್ಡಾಯವಾಗಿ ಕೋವಿಡ್ ನಿಯಮ ಪಾಲಿಸಬೇಕು. ಜತೆಗೆ ಹೋಟೆಲ್ ಸಿಬ್ಬಂದಿ ಕೋವಿಡ್ ಪರೀಕ್ಷೆಗೊಳಗಾಗಬೇಕು, ಕೋವಿಡ್ ಲಸಿಕೆಯನ್ನು ಪಡೆಯಬೇಕು,'' ಎಂದು ಮನವಿ ಮಾಡಿದರು.

''ಕೋವಿಡ್ ಉಲ್ಬಣಗೊಳ್ಳುವುದನ್ನು ನಿಯಂತ್ರಿಸಬೇಕಾಗಿದೆ. ಹೀಗಾಗಿ, ನಿಯಮ ಪಾಲನೆ ಕಡ್ಡಾಯವಾಗಿದೆ. ಒಂದು ವೇಳೆ ನಿಯಮಗಳನ್ನು ಪಾಲಿಸದ ಹೋಟೆಲ್‌ಗಳಿಗೆ ಪಾಲಿಕೆ ಆರೋಗ್ಯಾಧಿಕಾರಿಗಳು, ಮಾರ್ಷಲ್‌ಗಳು ಭೇಟಿ ನೀಡಿ ದಂಡ ವಿಧಿಸಲಿದ್ದಾರೆ. ಜತೆಗೆ ಹೋಟೆಲ್‌ಗಳನ್ನು ಮುಚ್ಚಿಸಲಾಗುವುದು,'' ಎಂದರು.

# ಹೋಟೆಲ್‌ಗಳ ಮೇಲೆ ಸವಾರಿಗೆ ಆಕ್ರೋಶ

» ನಮ್ಮ ಮೊದಲ ಪುಟದಿಂದ

ವ್ಯಾಪಾರ ತಕ್ಕಮಟ್ಟಿಗೆ ನಡೆಯುತ್ತಿದೆ. ಹೋಟೆಲ್‌ಗಳಿಗೆ ಬರುವ ಗ್ರಾಹಕರು ಮಾಸ್ಕ್ ಧರಿಸಿಯೇ ಬರುತ್ತಾರೆ. ತಿಂಡಿ, ಊಟ ಮಾಡುವಾಗ ಮಾಸ್ಕ್ ತೆಗೆಯುತ್ತಾರೆ. ಹಾಗೆಯೇ ನಮ್ಮ ಸಿಬ್ಬಂದಿಗೆ ಮಾಸ್ಕ್ ಹಾಗೂ ಕೈಗವಸು ಹಾಕಿಸುತ್ತಿದ್ದೇವೆ. ಕುಡಿಯಲು ಬಿಸಿನೀರು ಕೊಡಲಾಗುತ್ತಿದೆ. ಹೋಟೆಲ್ ಪ್ರವೇಶ ದ್ವಾರದಲ್ಲಿ ಸ್ಯಾನಿಟೈಸರ್ ಇಡಲಾಗಿದೆ. ಗ್ರಾಹಕರು ಒಳಬರುವಾಗ ಸ್ಯಾನಿಟೈಸರ್ ಬಳಸುವಂತೆ ತಿಳಿ ಹೇಳುತ್ತಿದ್ದೇವೆ. ಇನ್ನು ಚಿಕ್ಕದಾದ ದರ್ಶಿನಿಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಂಡಿಲ್ಲ ಎಂದು ದಂಡ ಹಾಕುವುದು ಹಾಗೂ ಬಾಗಿಲು ಮುಚ್ಚಿಸುವುದರಲ್ಲಿ ಅರ್ಥವಿಲ್ಲ. ದರ್ಶಿನಿಗಳನ್ನು ಕಿರಿದಾದ ಜಾಗದಲ್ಲಿ ನಡೆಸಲಾಗುತ್ತಿದೆ. ಅಲ್ಲಿನ ಜಾಗಕ್ಕೆ ಅನುಗುಣವಾಗಿ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಅಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಿ ಅಂದರೆ ಹೇಗೆ'' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ಪ್ರಶ್ನಿಸುತ್ತಾರೆ.

**ಪುನರಾರಂಭಿಸಲು ಅನುಮತಿ ನೀಡಲಿ :** ನಿಯಮ ಉಲ್ಲಂಘನೆ ಆರೋಪ ಮಾಡಿ ಈಗಾಗಲೇ ಹತ್ತಾರು ಹೋಟೆಲ್‌ಗಳಿಗೆ ಬೀಗ ಹಾಕಲಾಗಿದೆ. ಹೋಟೆಲ್ ನಡೆಸುತ್ತಿದ್ದ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಬಿಬಿಎಂಪಿಯು ಬೀಗ ಹಾಕಿರುವ ಹೋಟೆಲ್‌ಗಳನ್ನು ಪುನಃ ತೆರೆಯಲು ಕೂಡಲೇ ಅನುಮತಿ ನೀಡಬೇಕು ಹೋಟೆಲ್ ಮಾಲೀಕರು ಒತ್ತಾಯಿಸಿದ್ದಾರೆ. ಈ ಸಂಬಂಧ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಹೋಟೆಲ್‌ಗಳ ಸಂಘದಿಂದ ದೂರ ನೀಡಲಾಗಿದೆ. ಮುಚ್ಚಳಿಕೆ ಬರೆಸಿಕೊಂಡು ಹೋಟೆಲ್ ತೆರೆಯಲು ಅನುಮತಿ ನೀಡಲಾಗುವುದು ಎಂದು ಬಿಬಿಎಂಪಿ ಆಯುಕ್ತರು ಭರವಸೆ ನೀಡಿದ್ದಾರೆ ಎಂದು ಹೋಟೆಲ್‌ಗಳ ಸಂಘ ತಿಳಿಸಿದೆ.

**ಸಾಮಾಜಿಕ ಅಂತರ ಕಷ್ಟ:** ಒಂದೇ ಕುಟುಂಬದ ಸದಸ್ಯರು ಒಟ್ಟಿಗೆ ಕುಳಿತು ಊಟ ಮಾಡಿದರೆ ಅದು ತಪ್ಪು ಎಂದು ಹೇಳುವುದು ಸರಿಯಲ್ಲ. ಅವರು ಮಾಸ್ಕ್ ಧರಿಸಿಕೊಂಡೇ ಬಂದಿರುತ್ತಾರೆ. ಹೋಟೆಲ್‌ನಲ್ಲಿ ಊಟ, ತಿಂಡಿ ಮಾಡುವಾಗಷ್ಟೇ ಮಾಸ್ಕ್ ತೆಗೆಯುತ್ತಾರೆ. ಹೋಟೆಲ್‌ನಿಂದ ಹೊರ ಹೋಗುವಾಗ ಎಲ್ಲರೂ ಮಾಸ್ಕ್ ಧರಿಸುತ್ತಾರೆ. ಇದನ್ನು ನಿಯಮ ಉಲ್ಲಂಘನೆ ಅಂದರೆ ಹೇಗೆ ? ಎಂಬುದು ಹೋಟೆಲ್ ಮಾಲೀಕರ ಪ್ರಶ್ನೆ.

### ಸಿಎಂಗೆ ಮನವಿ ಸಲ್ಲಿಸಲು ನಿರ್ಧಾರ


ಬಿಬಿಎಂಪಿ ಮಾರ್ಷಲ್‌ಗಳ ಉಪಟಳ ಹೆಚ್ಚಿದೆ. ಅವರಿಗೆ ದಂಡ ಹಾಕಲಷ್ಟೇ ಅಧಿಕಾರ. ಆದರೆ ಹೋಟೆಲ್ ಹಾಗೂ ಅಂಗಡಿಗಳ ಬಾಗಿಲು ಮುಚ್ಚಿಸಿ ಕಿರುಕುಳ ನೀಡಲಾಗುತ್ತಿದೆ. ಇದನ್ನು ಸಹಿಸಲು ಸಾಧ್ಯವಿಲ್ಲ. ಈ ಸಂಬಂಧ ಒಂದೆರಡು ದಿನಗಳಲ್ಲಿ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಚರ್ಚಿಸಲು ಹೋಟೆಲ್ ಸಂಘ ನಿರ್ಧರಿಸಿದೆ.

## 28 ಮಳಿಗೆಗಳಿಗೆ ಬೀಗ

» ನಮ್ಮ ಮೊದಲ ಪುಟದಿಂದ

ಪಾಲಿಕೆಯ ಪೂರ್ವ ವಲಯದ ಸರ್ವಜ್ಞನಗರದಲ್ಲಿನ ರವಿ ಟೀ ಸ್ಟಾಲ್, ವಿನಾಯಕ ಹಾಟ್‌ಚಿಪ್ಸ್, ಡಿಸೋಜಾ ಜ್ಯೂಸ್ ಸೆಂಟರ್, ಹೆಬ್ಬಾಳದಲ್ಲಿನ ಬಸವೇಶ್ವರ ಎಂಟರ್‌ಪ್ರೈಸಸ್, ರೆಸಿಡೆನ್ಸಿ ರಸ್ತೆಯ ಉಡುಪಿ ಪಾರ್ಕ್ ಹೋಟೆಲ್, ಮೇಘನಾ ಫುಡ್ಸ್ ರೆಸ್ಟೋರೆಂಟ್, ಮಿಷನ್ ರಸ್ತೆಯಲ್ಲಿನ ನೋಬಲ್ ಸೂಪರ್ ಮಾರ್ಕೆಟ್, ವಸಂತನಗರದ ಅಲ್‌ಅಮೀನ್ ಸ್ಟೋರ್, ಸಿ.ವಿ.ರಾಮನಗರದ ಕಬ್ಬಾಳಮ್ಮ ಕಾಂಡಿಮೆಂಟ್ಸ್, ಗೋಲ್ಡನ್ ಸಿಸರ್ಸ್‌ಸಲೂನ್, ಟೈಮ್ ಪಾಸ್, ಫ್ರೂಟ್ ಫೇಸ್ ಜ್ಯೂಸ್ ಹಾಗೂ ಶರೀಫ್ಸ್ ಟೀ ಸ್ಟಾಲ್‌ಗೆ ಬೀಗಮುದ್ರೆ ಹಾಕಿಸಲಾಗಿದೆ. ಹಾಗೆಯೇ, ಹಲವೆಡೆ ಕಾರ್ಯಾಚರಣೆ ನಡೆಸಿ, ಮಾಸ್ಕ್ ಧರಿಸದ, ಸಾಮಾಜಿಕ ಅಂತರ ಕಾಯ್ದುಕೊಳ್ಳದವರಿಗೆ 58 ಸಾವಿರ ರೂ. ದಂಡ ವಿಧಿಸಲಾಗಿದೆ.

ದಾಸರಹಳ್ಳಿ ವಲಯದಲ್ಲಿ ನಿಯಮ ಉಲ್ಲಂಘಿಸಿದವರಿಂದ 7 ಸಾವಿರ ರೂ. ದಂಡ ವಸೂಲು ಮಾಡಲಾಗಿದೆ. ಬೊಮ್ಮನಹಳ್ಳಿ ವಲಯದ ಸಾರಕ್ಕಿ ಬಳಿಯ ಮುನೇಶ್ವರ ಮೋಟರ್ಸ್, ಬೇಗೂರು ಮುಖ್ಯರಸ್ತೆಯ ದಾವಣಗೆರೆ ಮಿರ್ಚಿ ಸೆಂಟರ್, ಪ್ರಿಯಾ ಹೋಮ್ ನೀಡ್ಸ್ ಮಳಿಗೆಗಳನ್ನು ಮುಚ್ಚಿಸಲಾಗಿದೆ. ಅದೇ ರೀತಿ ಇದೇ ವಲಯದ ಹಲವು ಅಂಗಡಿ-ಮುಂಗಟ್ಟುಗಳಿಂದ 71 ಸಾವಿರ ರೂ. ದಂಡ ಸಂಗ್ರಹಿಸಲಾಗಿದೆ. ಮಹದೇವಪುರ ವಲಯದ ದೊಡ್ಡನೆಕ್ಕುಂದಿಯ ಮೋರ್ ರೀಟೇಲ್ ಪ್ರೈವೆಟ್ ಲಿಮಿಟೆಡ್, ಓಯಸಿಸ್ ಕೇರಳ ರೆಸ್ಟೋರೆಂಟ್, ಕಾಡುಗೋಡಿಯ ಚನ್ನಸಂದ್ರ ಮುಖ್ಯರಸ್ತೆಯಲ್ಲಿನ ಸ್ಟಾರ್ ಬೇಕರಿಗೆ ಬೀಗ ಹಾಕಿಸಿ, 20 ಸಾವಿರ ರೂ. ದಂಡ ಹಾಕಲಾಗಿದೆ.



| ಉದ್ದಿಮೆಗಳನ್ನು ಮುಚ್ಚಿಸಿರುವ ವಿವರ | |
|---|---|
| ವಲಯ | ಉದ್ದಿಮೆಗಳ ಸಂಖ್ಯೆ |
| ಯಲಹಂಕ | 1 |
| ಮಹದೇವಪುರ | 3 |
| ಪಶ್ಚಿಮ | 5 |
| ದಕ್ಷಿಣ | 4 |
| ಬೊಮ್ಮನಹಳ್ಳಿ | 3 |
| ಪೂರ್ವ | 11 |
| ಆರ್ ಆರ್ ನಗರ | 1 |
| ಒಟ್ಟು | 28 |

## ಕೋವಿಡ್ ಸೋಂಕಿತರಿಗೆ 6000 ಹಾಸಿಗೆ ಮೀಸಲು

**ಬೆಂಗಳೂರು:** ಮುಂದಿನ 10 ದಿನಗಳಲ್ಲಿ ಕನಿಷ್ಠ ಆರು ಸಾವಿರ ಹಾಸಿಗೆಗಳನ್ನು ಕೋವಿಡ್ ಸೋಂಕಿತರಿಗಾಗಿ ಮೀಸಲಿಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅಧಿಕಾರಿಗಳಿಗೆ ಸೂಚಿಸಿದರು. ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಪ್ರಮಾಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸೆಂಟ್ರಲ್ ಹಾಸ್ಪಿಟಲ್ ಬೆಡ್ ಅಲೋಕೇಷನ್ ತಂಡದ ಜತೆ ಶುಕ್ರವಾರ ಸಭೆ ನಡೆಸಿದರು. ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿತರಿಗೆ ಹಾಸಿಗೆ ಲಭ್ಯತೆ, ಸಹಾಯವಾಣಿ ಸಂಖ್ಯೆ ಹಾಗೂ ಇನ್ನಿತರೆ ವಿಷಯಗಳ ಕುರಿತು ಚರ್ಚಿಸಿದರು.